# 7

# ಒಂದು ಪರಿಪೂರ್ಣವಾದ ಯಜ್ಞ ಹಾಗೂ ಅದರ ಪರಿಣಾಮಗಳು

## (ಅಧ್ಯಾಯ 10)

ಆದಿ ಕಾಲದಿಂದಲೇ ಪಾಪ ಪರಿಹಾರಕ ಯಜ್ಞಗಳನ್ನು ಅರ್ಪಿಸುತ್ತಿದ್ದರು. ಆದಿಕಾಂಡದ ಪ್ರಕಾರ, ಮನುಷ್ಯನ ಚರಿತ್ರೆಯ ಆರಂಭದಲ್ಲಿಯೇ, ದೇವರಿಗಾಗಿ ಯಜ್ಞಗಳನ್ನು ಅರ್ಪಿಸುತ್ತಿದ್ದರು. ನಂತರದಲ್ಲಿ ಮೋಶೆಯ ಧರ್ಮಶಾಸ್ತ್ರವು ಸಹ ಯಜ್ಞಗಳನ್ನು ಬಯಸಿತ್ತು. ವಿಗ್ರಹ ಆರಾಧಕರು ಸಹ ಯಜ್ಞಗಳನ್ನು ಅರ್ಪಿಸುತ್ತಿದ್ದರು. ಅದಕ್ಕೆ ಏನನ್ನು ಬಳಸುತ್ತಿದ್ದರು? ಸಾವಿರಾರು ಕುರಿ, ದನ, ಹಾಗು ಆಡುಗಳನ್ನು ಯಜ್ಞ ಮಾಡುತ್ತಿದ್ದರು - ಅವುಗಳು ಎಷ್ಟು ಪಾಪಗಳನ್ನು ನಿವಾರಣೆ ಮಾಡಿದವು? ಉತ್ತರವನ್ನು ಇಬ್ರಿಯ ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ:

> ಧರ್ಮಶಾಸ್ತ್ರದಲ್ಲಿ ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯೇ ಹೊರತು ಅವುಗಳ ನಿಜ ಸ್ವರೂಪವಲ್ಲವಾದದರಿಂದ ಆ ಧರ್ಮಶಾಸ್ತ್ರವು ವರುಷ ವರುಷಕ್ಕೆ ಪದೇ ಪದೇ ಅರ್ಪಿತವಾಗುವ ಒಂದೇ ವಿಧವಾದ ಯಜ್ಞಗಳನ್ನು ಅರ್ಪಿಸಿ ದೇವರ ಸಮೀಪಕ್ಕೆ ಬರುವವರನು ಎಂದಿಗೂ ಸಿದ್ಧಿಗೆ ತರಲಾರದು. ತಂದಿದ್ದ ಪಕ್ಷದಲ್ಲಿ ಆ ಯಜ್ಞ ಸಮರ್ಪಣೆಯು ನಿಂತು ಹೋಗುತ್ತಿತ್ತಲ್ಲಾ. ಯಾಕಂದರೆ ದೇವಾರಾಧನೆ ಮಾಡುವವರು ಒಂದೇ ಸಾರಿ ಶುದ್ಧೀಕರಿಸಲ್ಪಟ್ಟ ಮೇಲೆ ಅವರಿಗೆ ಪಾಪವುಂಟೆಂದು ಅವರ ಮನಸ್ಸು ಇನ್ನೂ ಸಾಕ್ಷಿಕೊಡುವದು ಹೇಗೆ? ಆದರೆ ಆ ಯಜ್ಞಗಳಿಂದ ಪ್ರತಿ ವರುಷದಲ್ಲಿಯೂ ಪಾಪಗಳ ಜ್ಞಾಪಕವಾಗುವದುಂಟು; ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿದೆಯಲ್ಲಾ (ಇಬ್ರಿಯ 10:1-4).

ಪ್ರಾಣಿಗಳ ರಕ್ತದಿಂದ ಯಾವುದೇ ವಿಧವಾದ ಪಾಪಗಳು ನಿವಾರಣೆಯಾಗಲು ಸಾಧ್ಯ ವಾಗಲಿಲ್ಲ! ಹಾಗಾದರೆ ಮನುಷ್ಯರು ರಕ್ಷಣೆಯನ್ನು ಹೊಂದುವದು ಹೇಗೆ? ಪಾಪ ನಿವಾರಣೆಗೆ ಯಜ್ಞವು ಅಗತ್ಯವಾಗಿದೆ; ಆದರೆ ಪಶುಗಳ ರಕ್ತದಿಂದ ಅದು ಅಸಾಧ್ಯವಾದರೆ, ಬೇರೆಯಾವ ಪರಿಹಾರವಿದೆ?

ಇಬ್ರಿಯ 10ರಲ್ಲಿ, ಇದಕ್ಕೆ ಉತ್ತರವಿದೆ. ಪಶುಗಳ ರಕ್ತವು ಅಸಮರ್ಪಕವಾಗಿತ್ತು. ಆಗ ಸಂಪರ್ಕವಾದ ಒಂದು ಯಜ್ಞವು ಸಮರ್ಪಿಸಲ್ಪಟ್ಟಿತ್ತು. ಆ ಪರಿಪೂರ್ಣವಾದ ಯಜ್ಞದಿಂದ ಉಂಟಾದ ಅನುಕೂಲತೆಗಳನ್ನು ಉಲ್ಲೆಖಿಸಲಾಗಿದೆ.

### ಕ್ರಿಸ್ತನು, ನಮ್ಮ ಪರಿಪೂರ್ಣ ಯಜ್ಞವಾಗಿದ್ದಾನೆ

ಇಬ್ರಿಯ 10:1-18ರಲ್ಲಿ ಎರಡು ಒಡಂಬಡಿಕೆಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಲಾಗಿದೆ. ಉತ್ತಮ ಹಾಗೂ ಉತ್ಕೃಷ್ಟವಾದ ನೈತಿಕ ಮೌಲ್ಯಗಳ ಕುರಿತಾದ ಚರ್ಚೆ ಇರುವದಿಲ್ಲ. ಅಥವಾ ಹೊಸ ಒಡಂಬಡಿಕೆಯು, ಹಳೆಯದೊಂದಿಗೆ ಭಿನ್ನಾಭಿಪ್ರಾಯವನ್ನು ತೋರುತ್ತಿರುವದಿಲ್ಲ, ಆದರೆ ಅದನ್ನು ಒಂದು ಸರಳವಾದ ರೀತಿಯಲ್ಲಿ ವಿವರಿಸಲಾಗಿದೆ. *ಹಳೆಯ ಒಡಂಬಡಿಕೆ ಪಾಪ ಪರಿಹಾರಮಾಡುವದಿಲ್ಲ, ಆದರೆ ಯೇಸುವಿನ ಪರಿಪೂರ್ಣವಾದ ಯಜ್ಞದಿಂದ ಪಾಪ ಪರಿಹಾರವಾಗುತ್ತದೆ.* ಮುಂದಿನ ಅಂಶಗಳನ್ನು ಗಮನಿಸಿರಿ:

*ಪಶುಗಳ ರಕ್ತವನ್ನು ಹೊರತುಪಡಿಸಿ ಕ್ರಿಸ್ತನ ಯಜ್ಞವು ಪಾಪನಿವಾರಣೆ ಮಾಡುತ್ತದೆ* (10:1-4). ಪಶುಗಳ ರಕ್ತವು ಸಮರ್ಪಕವಾಗಿದ್ದರೆ, ಆ ಕ್ರಿಯೆಯನ್ನೇ ಮುಂದುವರೆಸಲಾಗುತ್ತಿತ್ತು. ಅವುಗಳು ಏನನ್ನು ಸಾಧಿಸಿದವು? 10:1-4ರ ಪ್ರಕಾರ ಅವುಗಳು ಪಾಪದ ನೆನಪನ್ನು ಮಾತ್ರ ಉಂಟುಮಾಡಿದವು. (ಪಾಪವನ್ನು ವರ್ಷದ ಮಟ್ಟಿಗೆ ಮುಂದುವರೆಸಲಾಯಿತು ಎಂದಿರುವದಿಲ್ಲ.[1])

*ಧರ್ಮಶಾಸ್ತ್ರದ ಪ್ರಕಾರವಾದ ಯಜ್ಞಗಳನ್ನು ಕ್ರಿಸ್ತನು ನಿಷೇದಿಸಿದನು.* ಇದಕ್ಕೆ ಸಹಾಯಕವಾಗಿ ಕೀರ್ತನೆ 40ನ್ನು ನೋಡಿರಿ. ಕ್ರಿಸ್ತನು ಯಜ್ಞವನ್ನು ನಿಷೇಧಿಸಿದನು (ಮತ್ತು ಧರ್ಮಶಾಸ್ತ್ರವನ್ನು) ಮತ್ತು "ಉಯಿಲು" ಸ್ಥಾಪಿಸಿದನು-ಅಂದರೆ ಹೊಸ ಒಡಂಬಡಿಕೆ ಅಥವಾ ಒಪ್ಪಂದವನ್ನು (10:9). ಈ ಒಡಂಬಡಿಕೆ ಸ್ಥಾಪಿಸಿದ ಯಶಸ್ಸಿನ ಮೂಲಕ ನಾವುಗಳು ಪರಿಶುದ್ಧರಾಗುತ್ತೇವೆ (10:10).

*ಯೇಸುವಿನ ಒಂದೇ ಯಜ್ಞದ ಮುಖಾಂತರ ಯೇಸು ಇದನ್ನು ಸಾಧಿಸಿರುವನು* (10:11-14). ವಚನ 14ರಲ್ಲಿ ಎರಡು ಉಪಾಯಗಳಿವೆ. ಮೊದಲನೆಯದಾಗಿ, (ಧರ್ಮಶಾಸ್ತ್ರದಲ್ಲಿರುವ ಅನೇಕ ಯಜ್ಞಗಳಿಗೆ ವ್ಯತಿರಿಕ್ತವಾಗಿ) ಯೇಸು ಒಂದೇ ಯಜ್ಞವನ್ನು ಸಮರ್ಪಿಸಿದನು. ಎರಡನೇ ಯದಾಗಿ, ಅದರ ಮೂಲಕ ಎಲ್ಲವನ್ನು "ಪರಿಪೂರ್ಣ" ಮಾಡಿದನು, ಅದು ಪದೇ ಪದೇ ಮಾಡುವಂಥದ್ದಾಗಿರಲಿಲ್ಲ. ಧರ್ಮಶಾಸ್ತ್ರದಿಂದ ಯಾವುದು ಸಾಧ್ಯವಾಗಲಿಲ್ಲವೋ, ಕ್ರಿಸ್ತನು ತನ್ನ ರಕ್ತದಿಂದ ಅದನ್ನು ಸಾಧಿಸಿದ್ದಾನೆ: ಪ್ರಾಣಿಗಳ ಯಜ್ಞಗಳು "ಪರಿಪೂರ್ಣಗೊಳಿಸಲಿಲ್ಲ" (10:1), ಆದರೆ ಕ್ರಿಸ್ತನ ರಕ್ತವು ಸಾಧ್ಯಗೊಳಿಸಿತು.

*ಪಾಪಕ್ಷಮೆಯು ಪರಿಪೂರ್ಣವಾದ ಯೇಸುವಿನ ಯಜ್ಞದ ಫಲಿತವಾಗಿದೆ.* ವಚನಗಳು 17, 18ರಲ್ಲಿ, ಅದರ ಮಹತ್ವದ ಅಂಶವನ್ನು ತಿಳಿಸಲಾಗಿದೆ: "ಅವರ ಪಾಪಗಳನ್ನೂ ಅವರ ದುಷ್ಕೃತ್ಯಗಳನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ ಎಂದು ಹೇಳುತ್ತಾನೆ. ಪಾಪಗಳು ಪರಿಹಾರವಾದಲ್ಲಿ ಇನ್ನೂ ಅವುಗಳ ವಿಷಯದಲ್ಲಿ ಸಮರ್ಪಣೆ ಮಾಡುವದು ಅವಶ್ಯವಿಲ್ಲ." ಪಾಪ ಕ್ಷಮಾಪಣೆ ಹಳೆ ಮತ್ತು ಹೊಸ ಒಡಂಬಡಿಕೆಯ ನಡುವೆ ಇರುವ ವ್ಯತ್ಯಾಸವಾಗಿದೆ. ಈ ಪಾಪಕ್ಷಮಾಪಣವು ಪರಿಪೂರ್ಣದ ಯಜ್ಞದ ಫಲಿತವಾಗಿ ಪದೇ ಪದೇ ಅರ್ಪಿಸುವ ಯಜ್ಞಗಳು ಅನಿವಾರ್ಯವಾಗಿವೆ. ಈ ವಾಸ್ತವವು ಒಂದು ಪ್ರಶ್ನೆಯು ಉದ್ಭವಿಸುವಂತೆ ಮಾಡುತ್ತದೆ: ಈ ಪರಿಪೂರ್ಣವಾದ ಯಜ್ಞವು ನಮ್ಮ ಜೀವಿತಕ್ಕೆ ಯಾವ ವಿಧವಾದ ಅರ್ಥವನ್ನು ನೀಡುತ್ತದೆ?

## ಆ ಯಜ್ಞಗಳಿಂದ ಸಾಧ್ಯವಾಗುವ ಕಾರ್ಯಗಳೇನು

ಯಜ್ಞದಿಂದ ಉಂಟಾದ ಪಾಪಕ್ಷಮೆಯಿಂದ ಆಶೀರ್ವಾದ ಹಾಗೂ ಹೊಣೆಗಾರಿಕೆಯು ಉಂಟಾಗುತ್ತವೆ.

### ನಮ್ಮ ಆಶೀರ್ವಾದ

ಆ ಆಶೀರ್ವಾದಗಳೇನು? (ಇಬ್ರಿಯ 10:19-21.) ದೇವರ ಸಮಕ್ಷಮದಲ್ಲಿ ಪ್ರವೇಶಿ ಸುವದಕ್ಕೆ ನಮಗೆ ಧೈರ್ಯವುಂಟಾಯಿತು (10:19, 20). ಹಾಗೂ ದೇವರ ಮನೆಯ ಮೇಲೆ ಅಧಿಕಾರಿಯಾಗಿರುವ ಶ್ರೇಷ್ಟನಾದ ಯಾಜಕನು ನಮಗಿದ್ದಾನೆ (10:21). "ಹೀಗಿರುವ ದರಿಂದ" ಎಂಬ ಹೇಳಿಕೆಯಿಂದ ಈ ಆಶೀರ್ವಾದಗಳು ಆರಂಭವಾಗುತ್ತದೆ. ಕ್ರಿಸ್ತನೆಂಬ ಮಹಾಯಾಜಕನನ್ನು ಹೊಂದಿಕೊಂಡು, ಆ ಪರಿಶುದ್ಧ ಸ್ಥಳಕ್ಕೆ ಪ್ರವೇಶ ಮಾಡುವದು ಸೌಭಾಗ್ಯಕರವಲ್ಲವೇ!

### ನಮ್ಮ ಹೊಣೆಗಾರಿಕೆ

ನಮ್ಮ ಹೊಣೆಗಾರಿಕೆಗಳೇನು? ಇಬ್ರಿಯ 10:22-25ರಲ್ಲಿ ಅದನ್ನು ಉಲ್ಲೇಖಿಸ

ಲಾಗಿದೆ. "ಈಗ ನಾವುಗಳು" ಎಂಬ ಹೇಳಿಕೆಯಿಂದ, ಮೂರು ಹೊಣೆಗಾರಿಕೆಗಳು ಆರಂಭವಾಗುತ್ತೇವೆ.

*"ದೇವರ ಬಳಿಗೆ ಬರೋಣ"* (10:22). ಯಥಾರ್ಥ ಹೃದಯವುಳ್ಳವರಾಗಿ ದೇವರ ಬಳಿಗೆ ಬರೋಣ. ಈ ಹಿಂದೆ ನಮಗಿದ್ದ ಅಪರಾಧಿ ಭಾವದ ಮನಸ್ಸನ್ನು ತೊಳಕೊಂಡರಾದ್ದರಿಂದ, ದೇಹವನ್ನು ತೊಳಕೊಂಡದ್ದರಿಂದ, ಆತನ ಬಳಿಗೆ ಬರುವ ಹಕ್ಕನ್ನು ಹೊಂದಿದ್ದೇವೆ. (ಮಾನಸಾಂತರ ಹಾಗೂ ದೀಕ್ಷಾಸ್ನಾನದ ಮೂಲಕ) ಇವೆರಡರ ಪರಿಣಾಮವನ್ನು ಈಗ ಹೊಂದಿದ್ದೇವೆ. ಈ ಹಿಂದೆ ಮಾನಸಾಂತರ ಪಟ್ಟು, ದೀಕ್ಷಾಸ್ನಾನ ಮಾಡಿಸಿಕೊಂಡೆವು ಆದ್ದರಿಂದ ಈಗ ಆತನ ಬಳಿಗೆ ಬರಲು ಸಾಧ್ಯವಾಯಿತು. ನಾವು ಯಾವಾಗಲೂ ದೇವರ ಸಂಗಡ ಮುಂದುವರೆಯಬೇಕು.

*"ನಿಶ್ಚಂಚಲವಾಗಿ ಪರಿಗ್ರಹಿಸೋಣ"* (10:23). ನಾವು ಮಾಡಿದ ಪ್ರತಿಜ್ಞೆಯನ್ನು ನಿಶ್ಚಂಚಲವಾಗಿ ಪರಿಗ್ರಹಿಸೋಣ. ಈ ಪತ್ರಿಕೆಯನ್ನು ಬರೆಯಿಸಿಕೊಂಡವರು ಚಂಚಲರಾಗಿದ್ದರು; ಅದನ್ನು ಹಿಡಿದುಕೊಳ್ಳದೆ ಇರುವ ದೊಡ್ಡ ತಪ್ಪನ್ನು ಅವರು ಮಾಡಿದಂತೆ, ನಾವುಗಳು ಮಾಡದೆ ಕ್ರಿಸ್ತನನ್ನು ಗಟ್ಟಿಯಾಗಿ ಹಿಡಿದು ಕೊಳ್ಳೋಣ!

*"ಒಬ್ಬರನ್ನೊಬ್ಬರು ಪ್ರೇರಿಸೋಣ"* (10:24, 25)[2] ನಾವೇನು ಮಾಡಬೇಕೆಂದು ಈ ವಾಕ್ಯಗಳು ತಿಳಿಸುತ್ತವೆ? (1) "ಪರಸ್ಪರ ಯಾವ ರೀತಿ ಪ್ರೇರಿಸಬೇಕೆಂದು" ಅದು ತಿಳಿಸುತ್ತದೆ. ಇತರರ ಹಿತ ಚಿಂತನೆಯನ್ನು ಉಂಟುಮಾಡಿ ಅವರನ್ನು ಉತ್ತಮ ಸ್ಥಿತಿಗೆ ತರಬೇಕು. (2) "ಪರಿಸ್ಪರರು ಒಳ್ಳೆಯ ಕಾರ್ಯವನ್ನು ಮಾಡಿ, *ಪ್ರೀತಿಸುವಂತೆ ಪ್ರೇರಿಸಬೇಕು."* "ಪ್ರೇರಿಸು" KJV ಎಂಬ ಪದವನ್ನು ಸಕಾರಾತ್ಮಕವಾಗಿ ಬಳಸಬೇಕು ಪರಸ್ಪರ ಉತ್ತೇಜಿಸಬೇಕು. (3) "ಪ್ರೀತಿಸುತ್ತಿರಬೇಕೆಂತಲೂ, ಸತ್ಕಾರ್ಯ ಮಾಡಬೇಕೆಂತಲೂ ಪ್ರೇರಿಸಬೇಕು" (KJV) ಅವರು ದೇವರನ್ನು ಹಾಗೂ ಇತರರನ್ನು ಪ್ರೀತಿಸುವಂತೆ ಪರಸ್ಪರರನ್ನು ಪ್ರೇರಿಸಬೇಕು ಎಂಬ ಅರ್ಥವಾಗಿದೆ.

ಈ ಸಂಗತಿಗಳನ್ನು ಸಾಧಿಸುವದು ಹೇಗೆ? ಪರಸ್ಪರ ಸಂಧಿಸುವದರಿಂದ ಪ್ರೀತಿಯ ಹಾಗೂ ಸತ್ಕಾರ್ಯಗಳ "ಪ್ರೇರಣೆಯನ್ನು" ಮಾಡಬಹದು. ಅದು ಉನ್ನತ ಮಟ್ಟದ ಉತ್ತೇಜನವಾಗಿದೆ. ಪ್ರತಿಯೊಬ್ಬರು ಒಟ್ಟಾಗಿ ಸೇರುವದರಿಂದ ಉತ್ತೇಜನ ಅಥವಾ ಸೇರಬಾರದೇ ಇರುವದರಿಂದ, ಅ ಧೈರ್ಯ ಉಂಟಾಗುತ್ತದೆ.

ಏಕೆ ಪರಸ್ಪರ ಉತ್ತೇಜಿಸಬೇಕು? ಯಾಕಂದರೆ ಕರ್ತನ ಪ್ರತ್ಯಕ್ಷತೆಯ "ದಿನವು ಸಮೀಪವಾಗಿದೆ"! ಆ "ದಿನ" ತೀರ್ಪನ ದಿನಕ್ಕೆ ಹೋಲಿಕೆಯಾಗಿದೆ. ಮೊದಲ ಶತಮಾನದಲ್ಲಿ ಅದು ಸಮೀಪವಾಗಿದ್ದಂತೆ, ಈ ದಿನಕ್ಕೂ ಸಮೀಪವಾಗಿದೆ.

*ಈ ಹೊಣೆಗಳನ್ನು ಪೂರ್ಣಮಾಡಲು, ಯಾವ ವಿಧವಾದ ಮೂಲವನ್ನು ಹೊಂದಿದ್ದೇವೆ?* ನಾವು ಸ್ವೀಕರಿಸಿರುವ ಆಶೀರ್ವಾದಗಳೇ ನಮಗೆ ಪ್ರೇರಣೆಯನ್ನು ನೀಡಲು ಸಮರ್ಥವಾಗಿದೆ. ಅವುಗಳಿಂದ ನಮ್ಮ ಹೊಣೆಗಳನ್ನು ನೆರವೇರಿಸಬಹದು. ಪ್ರತಿಫಲ ಹಾಗೂ ಶಿಕ್ಷೆಯ ಕುರಿತು ಈ ಹಿಂದೆ ನೋಡಿದ್ದೇವೆ (ಇಬ್ರಿಯ 6).

(1) *ಅವಿಧೇಯತೆಯ ಪರಿಣಾಮ* (10:26-31). ಅವಿಧೇಯತೆಯ ಪರಿಣಾಮದ ಬಗ್ಗೆ ಬರಹಗಾರನು ಬರೆದಿರುವನು ವಚನ 26-31ರಲ್ಲಿ ಹಳೆ ಒಡಂಬಡಿಕೆಯ ತ್ಯಾಗದ ಕ್ರಮವನ್ನು ತಿಳಿಸಿ, ಉದ್ದೇಶಪೂರ್ವಕ ಪಾಪಗಳಿಗೆ ಪರಿಹಾರವಿಲ್ಲ ವೆಂದು ಸಹ ತಿಳಿಸಿರುವನು (ವಿಮೋಚನಕಾಂಡ 14:8; ಅರಣ್ಯಕಾಂಡ 33:3). ಆ ವಿಧವಾದ ಪಾಪಗಳು, ದೇವರಿಗೆ ಅತಿ ವಿರೋಧವಾಗಿರುತ್ತದೆ. ಹೊಸ ಒಡಂಬಡಿಕೆಯಲ್ಲೂ ಇದೇ ಕ್ರಮವನ್ನು ನೋಡುತ್ತೇವೆ. ಈ ದಿನಗಳಲ್ಲಿರುವ ಉತ್ತಮವಾದ ಕ್ರಮವನ್ನು ಸಹ ತಿಳಿಸಲಾಗಿದೆ: ಈ ಉತ್ತಮವಾದ ಕ್ರಮವನ್ನು ನಾವು ನಿರಾಕರಿಸಿದರೆ, ಹಳೆ ಒಡಂಬಡಿಕೆಯಲ್ಲಿ ಜನರು ಹೊಂದಿದ ಶಿಕ್ಷೆಯನ್ನು ನಾವುಗಳು ಅನುಭವಿಸುತ್ತೇವೆ.

(2) *ವಿಧೇಯತೆಗೆ ದೊರೆಯುವ ಪ್ರತಿಫಲ* (10:32-39). ಓದುಗರು ಈಗಾಗಲೇ ಕ್ರೈಸ್ತರಾಗಿ ತಮಗೆ ಅನುಗ್ರಹವಾಗಿರುವ ಸಮಯವನ್ನು ವ್ಯರ್ಥಮಾಡಿಕೊಳ್ಳಬಾರದೆಂದು ತಿಳಿಸಲಾಗಿದೆ (10:32-34), ಕ್ರಿಸ್ತನನ್ನು ಅನುಸರಿಸುವದರಿಂದ ದೊರೆಯುವ ಪ್ರತಿಫಲವನ್ನು ಸಹ ನೆನಪು ಮಾಡಲಾಗಿದೆ (10:35). ಅವರುಗಳು ನಂಬಿಗಸ್ತರಾಗಿರ ಬೇಕು (10:36-39).

## ಮುಕ್ತಾಯ

ನಮಗೋಸ್ಕರವಾಗಿ ಕ್ರಿಸ್ತನು ಪರಿಪೂರ್ಣವಾದ ಯಜ್ಞವನ್ನು ಅರ್ಪಿಸಿರುವನು. ನಾವು ಅವುಗಳನ್ನು ಹೊಂದುವದಾದರೆ, ಸಕಲ ಆಶೀರ್ವಾದಗಳು ನಮ್ಮದೇ ಆಗುತ್ತವೆ: ಆತನ ಸನ್ನಿಧಿಗೆ ಪ್ರವೇಶ ಮಾಡುವಂತೆ ಪಾಪಕ್ಷಮೆಯನ್ನು ಹೊಂದುತ್ತೇವೆ, ಮತ್ತು ಕ್ರಿಸ್ತನೆ ನಮ್ಮ ಮಹಾ ಯಾಜಕನಾಗಿದ್ದಾನೆ.

ಆ ಪರಿಪೂರ್ಣವಾದ ಪ್ರತಿಫಲವನ್ನು ಆನಂದಿಸಲು, ನಾವು ದೇವರ ಬಳಿಯಲ್ಲಿಯೇ ಮುಂದುವರೆಯಬೇಕು, ಕ್ರಿಸ್ತನಲ್ಲಿರುವ ವಿಧೇಯತೆಯ ನಂಬಿಕೆಯನ್ನು ಹೊಂದಿರಬೇಕು ಪರಸ್ಪರರು ಪ್ರೀತಿಸಬೇಕು ಪ್ರೇರಿಸಬೇಕು. ಮುಖ್ಯವಾಗಿ, ನಾವುಗಳು ನಂಬಿಗಸ್ತರಾಗಿ ಒಟ್ಟಾಗಿ ಕೂಡಿ ಬರವ ಮೂಲಕ ಸಂಗತಿಗಳನ್ನು ಮಾಡಬಹುದು.

ದೇವರ ಯೋಜನೆಯನ್ನು ಪಾಲಿಸುವಲ್ಲಿ ಸೋತಿದ್ದೇವೋ? ಹಾಗಿದ್ದಲ್ಲಿ ಭಯಾನಕ ಸಂಗತಿಯನ್ನು ಎದುರಿಸಬೇಕಾಗುತ್ತದೆ. ನಾವೆಲ್ಲರು ದೇವರ ಅನುಗ್ರಹವುಳ್ಳ ಹಸ್ತಗಳಿಗೆ ಒಳಗಾಗೋಣ, ಅಪನಂಬಿಗಸ್ತರಾಗಿದ್ದರೆ, ದೇವರ ಭಯಾನಕ ಕೈಗಳಿಗೆ ತುತ್ತಾಗುತ್ತೇವೆ. "ಜೀವ ಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿಬೀಳುವದು ಭಯಂಕರವಾದದ್ದು" (10:31).

---

ಟಿಪ್ಪಣಿಗಳು

[1]10:4 ಪಶುಗಳ ರಕ್ತ ಪಾಪ ಪರಿಹಾರ ನೀಡಲಿಲ್ಲ, ಹಾಗಾದರೆ ಧರ್ಮಶಾಸ್ತ್ರಕ್ಕೆ ಒಳಗಾದ ಜನರಿಗೆ ಪಾಪಕ್ಷಣೆ ಹೇಗೆ? ಯೇಸುವಿನ ರಕ್ತದಿಂದಲೇ ಅದರ ಪರಿಣಾಮವು ಹಿಂಬದಿಗೂ ಹಾಗೂ ಮುಂಬದಿಗೂ ಚಲಿಸುವಂಥದ್ದಾಗಿದೆ. ಅವನ ಮರಣದ ಹಿಂದಿನ ಹಾಗೂ ನಂತರದ ಪಾಪಗಳನ್ನು ನಿವಾರಣೆ ಮಾಡುತ್ತದೆ. ಹಿಂದಿನವರು ಧರ್ಮಶಾಸ್ತ್ರಕ್ಕೆ ಒಳಗಾಗಿರಬೇಕು ನಂತರದವರು ಸುವಾರ್ತೆಗೆ ಒಳಗಾಗ ಬೇಕು. [2]ಇಬ್ರಿಯ 10:25 ಪಾಠವನ್ನು ನೋಡಿರಿ.